ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಡಿಟಿಇ 28 ಸಿಡಿಸಿ(1) 2016–17

ನಿರ್ದೇಶಕರ ಕಾರ್ಯಾಲಯ
ಅರಮನೆ ರಸ್ತೆ, ಬೆಂಗಳೂರು–560 001.
ದಿನಾಂಕ: 08–08–2016.

ಇವರಿಗೆ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ),
ಬಹು ಮಹಡಿ ಕಟ್ಟಡಗಳು,
ಬೆಂಗಳೂರು–560 001.

ಮಾನ್ಯರೇ,

ವಿಷಯ: ಡಿಪ್ಲೊಮಾ ಕ್ಯಾರಿ ಓವರ್ ಸಂಬಂಧ ವಿವಿಧ ವಿದ್ಯಾರ್ಥಿ ಸಂಘಟಣೆಗಳು ಮಾಡಿರುವ ಮನವಿಗಳಿಗೆ ಸ್ಪಷ್ಟೀಕರಣ

ಉಲ್ಲೇಖ: ವಿವಿಧ ವಿದ್ಯಾರ್ಥಿ ಸಂಘಟಣೆಗಳು ಡಿಪ್ಲೊಮಾ ಕ್ಯಾರಿ ಓವರ್ ಸಂಬಂಧ ಮಾಡಿರುವ ಮನವಿಗಳು ಮತ್ತು ಪತ್ರಿಕಾ ಹೇಳಿಕೆಗಳು.

2009–10ನೇ ಸಾಲಿನಿಂದ ಅಳವಡಿಸಿರುವ ಡಿಪ್ಲೊಮಾ ಪಠ್ಯಕ್ರಮಗಳಿಗೆ ಸಂಬಂಧಿಸಿದಂತೆ, ಸರ್ಕಾರದ ಆದೇಶ ಸಂಖ್ಯೆ: ಇಡಿ 178 ಟಿಪಿಇ 2009. ದಿ:01–08–2009ರಲ್ಲಿರುವ "Regulations and Guidelines for Diploma courses as per the curriculum-C-09/10" ಪ್ರಕಾರ ಹಿಂದಿನ ವರ್ಷಗಳ ಬಾಕಿ ಒಟ್ಟು ವಿಷಯಗಳ ಪೈಕಿ ನಾಲ್ಕು ಅಥವಾ ನಾಲ್ಕಕ್ಕಿಂತ ಕಡಿಮೆ ವಿಷಯಗಳಲ್ಲಿ ಅನುತ್ತೀರ್ಣರಾಗಿದ್ದಲ್ಲಿ ಮಾತ್ರ ಮುಂದಿನ ವರ್ಷದ ತರಗತಿಗಳಿಗೆ ಪ್ರವೇಶ ಪಡೆಯಲು ಅರ್ಹರಾಗಿರುತ್ತಾರೆ.

ಸದರಿ ಕ್ಯಾರಿ ಓವರ್ ನಿಯಮಾವಳಿಗಳನ್ನು ಸಡಿಲಿಸಲು ಮತ್ತು ಪೂರ್ಣ ಕ್ಯಾರಿಓವರ್ ವಿಸ್ತರಿಸುವಂತೆ ಕೋರಿ, 2012ರ ಸಾಲಿನಲ್ಲಿ ಕೆಲವು ವಿದ್ಯಾರ್ಥಿಗಳು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ:32330–32437/2012 (ಇಡಿಎನ್) ಹಾಗೂ ಇತರೆ ರಿಟ್ ಪಿಟಿಷನ್ ಗಳಲ್ಲಿ ದಾವೆ ಹೂಡಿದ್ದರು. ಈ ಕುರಿತಂತೆ ದಿನಾಂಕ:10–09–2012 ರಂದು ಮಾನ್ಯ ಉಚ್ಚ ನ್ಯಾಯಾಲಯ ಬೆಂಗಳೂರು, ಏಕ ಸದಸ್ಯ ಪೀಠವು ಸರ್ಕಾರದ ಆದೇಶ ದಿ:01–08–2009ರಲ್ಲಿ ಅಳವಡಿಸಿರುವ "Regulations and Guidelines for Diploma courses as per the curriculum-C-09/10" ರಂತೆ 2013–14ನೇ ಸಾಲಿನಿಂದ ಕ್ಯಾರಿ ಓವರ್ ನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ತಿಳಿಸಿ ತೀರ್ಪನ್ನು ನೀಡಿತ್ತು.

ಸದರಿ ಮಾನ್ಯ ಉಚ್ಚ ನ್ಯಾಯಾಲಯದ ಏಕ ಸದಸ್ಯ ಪೀಠದ ತೀರ್ಪಿನ ಆದೇಶವನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದ ಸಂಚಾರಿ ಪೀಠ, ಧಾರವಾಡದಲ್ಲಿ ದ್ವಿಸದಸ್ಯ ಪೀಠದ ಮುಂದೆ ಕೆಲವು ವಿದ್ಯಾರ್ಥಿಗಳು ರಿಟ್ ಅಪೀಲ್ ಸಂಖ್ಯೆ: 31203/2012ನ್ನು ದಾಖಲಿಸಿ, ಪೂರ್ಣ ಕ್ಯಾರಿ ಓವರ್ ಸೌಲಭ್ಯವನ್ನು ನೀಡುವಂತೆ ಮೇಲ್ಮನವಿ ಸಲ್ಲಿಸಿದ್ದರು. ಸದರಿ

ಮೇಲ್ಮನವಿಯನ್ನು ವಿಚಾರಣೆಗೆ ಒಳಪಡಿಸಿದ, ದ್ವಿಸದಸ್ಯ ಪೀಠವು ದಿನಾಂಕ 6-12-2012 ರಲ್ಲಿ ತೀರ್ಪನ್ನು ನೀಡಿ, ದಿನಾಂಕ 10-09-2012 ರಲ್ಲಿ ಏಕ ಸದಸ್ಯ ಪೀಠ ನೀಡಿದ ತೀರ್ಪನ್ನು ಎತ್ತಿ ಹಿಡಿದು, 2013-14ನೇ ಸಾಲಿನಿಂದ ಕಡ್ಡಾಯವಾಗಿ ಸರ್ಕಾರದ ಆದೇಶ ದಿ:01-08-2009ರಲ್ಲಿ ಅಳವಡಿಸಿರುವ "Regulations and Guidelines for Diploma courses as per the curriculum-C-09/10" ರಲ್ಲಿ ತಿಳಿಸಿದಂತೆ ಹಿಂದಿನ ವರ್ಷದ ಬಾಕಿ ಒಟ್ಟು ವಿಷಯಗಳ ಪೈಕಿ ನಾಲ್ಕು ಅಥವಾ ನಾಲ್ಕಕ್ಕಿಂತ ಕಡಿಮೆ ವಿಷಯಗಳಲ್ಲಿ ಅನುತ್ತೀರ್ಣರಾಗಿದ್ದಲ್ಲಿ ಮಾತ್ರ ಮುಂದಿನ ವರ್ಷದ ತರಗತಿಗಳಿಗೆ ಪ್ರವೇಶ ನೀಡುವಂತೆ ತಿಳಿಸಿ ಅಪೀಲ್‌ನ್ನು ತಿರಸ್ಕರಿಸಿ, ಶೈಕ್ಷಣಿಕ ಗುಣಮಟ್ಟವನ್ನು ಕಾಯ್ದುಕೊಳ್ಳುವಂತೆ ತಿಳಿಸಿ ತೀರ್ಪನ್ನು ನೀಡಿತ್ತು.

ಮಾನ್ಯ ಉಚ್ಚ ನ್ಯಾಯಾಲಯಗಳ ಏಕಸದಸ್ಯ ಪೀಠ ಹಾಗು ದ್ವಿಸದಸ್ಯ ಪೀಠಗಳು ನೀಡಿರುವ ತೀರ್ಪಿನ ಆದೇಶಗಳ ಬಗ್ಗೆ ರಾಜ್ಯದ ಅಂದಿನ ಮಾನ್ಯ ಅಡ್ವೋಕೇಟ್ ಜನರಲ್‌ರವರು ಅಭಿಪ್ರಾಯವನ್ನು ನೀಡುತ್ತಾ, ಮಾನ್ಯ ಉಚ್ಚ ನ್ಯಾಯಾಲಯಗಳ ಏಕಸದಸ್ಯ ಪೀಠ ಹಾಗು ದ್ವಿಸದಸ್ಯ ಪೀಠಗಳು ನೀಡಿರುವ ತೀರ್ಪಿನ ಆದೇಶಗಳನ್ನು ಪಾಲಿಸುವುದು ಕಡ್ಡಾಯವಾಗಿದ್ದು, ಇದಕ್ಕೆ ತಪ್ಪಿದ್ದಲ್ಲಿ ನ್ಯಾಯಾಲಯ ನಿಂದನೆಯಾಗಬಹುದೆಂದು ಎಚ್ಚರಿಸಿ, ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟವನ್ನು ಕಾಯ್ದುಕೊಳ್ಳಲು ಹಾಗು ಈ ಬಗ್ಗೆ ವಿದ್ಯಾರ್ಥಿಗಳಿಗೆ ಸೂಕ್ತ ಸಂದೇಶವನ್ನು ನೀಡಿ, ಕ್ಯಾರಿ ಓವರ್ ಬಗ್ಗೆ ಸರ್ಕಾರದ ಆದೇಶ ದಿ:01-08-2009ರಲ್ಲಿ ಅಳವಡಿಸಿರುವ "Regulations and Guidelines" ನಲ್ಲಿ ತಿಳಿಸಿದಂತೆ ಹಿಂದಿನ ವರ್ಷದ ಬಾಕಿ ಒಟ್ಟು ವಿಷಯಗಳ ಪೈಕಿ ನಾಲ್ಕು ಅಥವಾ ನಾಲ್ಕಕ್ಕಿಂತ ಕಡಿಮೆ ವಿಷಯಗಳಲ್ಲಿ ಅನುತ್ತೀರ್ಣರಾಗಿದ್ದಲ್ಲಿ ಮಾತ್ರ ಮುಂದಿನ ತರಗತಿಗಳಿಗೆ ಪ್ರವೇಶ ನೀಡಬೇಕಾಗಿರುತ್ತದೆ ಎಂದು ತಿಳಿಸಿರುತ್ತಾರೆ. (ಅನುಬಂಧ-1)

ಕರ್ನಾಟಕ ಖಾಸಗಿ ಪಾಲಿಟೆಕ್ನಿಕ್ ಅಸೋಸಿಯೇಶನ್ ಹಾಗು ಇನ್ನಿತರರು, 2014ನೇ ಸಾಲಿನಲ್ಲಿ ಡಿಪ್ಲೊಮಾ ಕ್ಯಾರಿ ಓವರ್ ನಿಯಮಾವಳಿಗಳ ಸಂಬಂಧಿಸಿದಂತೆ, ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂ. 35484-490/2014ರಲ್ಲಿ ಡಿಪ್ಲೊಮಾ ವಿದ್ಯಾರ್ಥಿಗಳಿಗೆ ಪೂರ್ಣ ಕ್ಯಾರಿ ಓವರ್ ಸೌಲಭ್ಯ ನೀಡುವಂತೆ ಕೋರಿದ್ದರು. ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಪಿಟಿಷನ್ ಸಂಖ್ಯೆ:32330-32437/2012 (ಇಡಿಎನ್) ಹಾಗು ರಿಟ್ ಅಪೀಲ್ ಸಂಖ್ಯೆ: 31203/2012ರಲ್ಲಿ ಅದಾಗಲೇ ನೀಡಿರುವ ತೀರ್ಪನ್ನು ಉಲ್ಲೇಖಿಸಿ, ವಿದ್ಯಾರ್ಥಿಗಳು ಕ್ಯಾರಿ ಓವರ್ ಬಗ್ಗೆ ಸರ್ಕಾರದ ಆದೇಶ ದಿ:01-08-2009ರಲ್ಲಿ ಅಳವಡಿಸಿರುವ "Regulations and Guidelines" ನಲ್ಲಿ ತಿಳಿಸಿದಂತೆ ಹಿಂದಿನ ವರ್ಷದ ಬಾಕಿ ಒಟ್ಟು ವಿಷಯಗಳ ಪೈಕಿ ನಾಲ್ಕು ಅಥವಾ ನಾಲ್ಕಕ್ಕಿಂತ ಕಡಿಮೆ ವಿಷಯಗಳಲ್ಲಿ ಅನುತ್ತೀರ್ಣರಾಗಿದ್ದಲ್ಲಿ ಮಾತ್ರ ಮುಂದಿನ ತರಗತಿಗಳಿಗೆ ಪ್ರವೇಶ ಪಡೆಯುವ ನಿಯಮಾವಳಿಗಳಿಗೆ ಒಳಪಟ್ಟಿದ್ದು, ನ್ಯಾಯಾಲಯವು ಈ ಬಗ್ಗೆ ಯಾವುದೇ ನಿರ್ದೇಶನವನ್ನು ನೀಡಲು ಸಾಧ್ಯವಿರುವುದಿಲ್ಲ ಎಂದು ತಿಳಿಸಿ, ರಿಟ್ ಅರ್ಜಿಯನ್ನು ವಿಲೆಮಾಡಿತ್ತು.

ಆದ್ದರಿಂದ ಡಿಪ್ಲೊಮಾ ಕ್ಯಾರಿ ಓವರ್ ನಿಯಮಾವಳಿಗಳ ಬಗ್ಗೆ ಮಾನ್ಯ ನ್ಯಾಯಾಲಯಗಳ ತೀರ್ಪಿನಂತೆ ನಡೆಯಬೇಕಾಗಿದ್ದು, ವಿದ್ಯಾರ್ಥಿಗಳು ಓದಿನ ಕಡೆಗೆ ಹೆಚ್ಚು ಗಮನ ನೀಡಿ, ಫೇಲಾದ ವಿಷಯಗಳಲ್ಲಿ ಓದಿ ಮತ್ತೊಮ್ಮೆ ಪರೀಕ್ಷೆಗಳನ್ನು ಬರೆದು ಪಾಸಾಗಿ, ಕ್ಯಾರಿ ಓವರ್ ನಿಯಮಾವಳಿಗಳನ್ನು ಪಾಲಿಸಿ ವಿದ್ಯಾಭ್ಯಾಸವನ್ನು ಮುಂದುವರೆಸಬಹುದಾಗಿದೆ ಎಂದು ಈ ಮೂಲಕ ಸ್ಪಷ್ಟೀಕರಿಸಲಾಗಿದೆ.

ತಮ್ಮ ನಂಬುಗೆಯ,

ನಿರ್ದೇಶಕರು

ಪ್ರತಿ:

1. **ಆಪ್ತ ಕಾರ್ಯದರ್ಶಿಗಳು, ಮಾನ್ಯ ಉನ್ನತ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು.-** ಮಾಹಿತಿಗಾಗಿ.
2. ಇ- ಆಡಳಿತ, ತಾ.ಶಿ. ನಿರ್ದೇಶನಾಲಯ, ಬೆಂಗಳೂರು ಇವರಿಗೆ ತಿಳಿಸಿ ವೆಬ್ ಸೈಟನಲ್ಲಿ ಪ್ರಕಟಿಸಲು ಮುಂದಿನ ಕ್ರಮಕ್ಕಾಗಿ.